ಸೆಟ್ಲ್ ಆಗಲಿ ಅನ್ನುವ ಬುದ್ಧಿಯಿದೆ. ನಾಳೆ ಇದೇ ಬುದ್ಧಿ ಇರತ್ತೇಂತ ಹೇಳಕ್ಕಾಗಲ್ಲ'

ಸಂಧ್ಯಾ ಒಪ್ಪಿದ್ದಳು.

ಕೋಲಾರದಲ್ಲಿ ಕಾಲೇಜ್ ಲೆಕ್ಚರರ್ ಆಗಿದ್ದ ರಾಮಮೋಹನ್ ಜೊತೆ ಅವಳ ಮದುವೆಯಾಗಿತ್ತು. ತಂದೆತಾಯಿಗೆ ಒಬ್ಬನೇ ಮಗ ತಂಗಿಯ ಜವಾಬ್ದಾರಿಯಿತ್ತು. ಸ್ವಂತ ಮನೆಯಿತ್ತು.

'ಯಾವ ಕಾರಣಕ್ಕೂ ಬೇರೆ ಮನೆ ಮಾಡಲು ಹೇಳಬಾರದು. ನಮ್ಮ ಜೊತೆ ಹೊಂದಿಕೊಂಡಿರಬೇಕು' ಎಂದು ಕಂಡಿಷನ್ ಹಾಕಿದ್ದ. ರಾಮಮೋಹನ್ ವರದಕ್ಷಿಣೆ, ವರೋಪಚಾರ ಏನೂ ಕೇಳಿರಲಿಲ್ಲ. ಬೃಂದಾ ತನ್ನ ಕೈಲಾಗಿದ್ದು ಕೊಟ್ಟು ಮದುವೆ ಮಾಡಿದ್ದಳು.

ಬೃಂದಾಳ ತಮ್ಮ ಸಂಜೀವ ಪಿ.ಯು.ಸಿ. ಮುಗಿಸುತ್ತಿದ್ದಂತೆ ಹೇಳಿದ್ದ. 'ಅಕ್ಕ, ನಾನು ಬಿ.ಇ. ಓದ್ತೀನಿ'

'ಆಗಲಿ. ನೀನು ಪಿ.ಯು.ಸಿ.ಯಲ್ಲಿ ಟ್ಯೂಷನ್‌ಗೆ ಹೋಗದೆ ಒಳ್ಳೆಯ ನಂಬರ್ ತೆಗೆದಿದ್ದೀಯ. ನಿನಗೆ ಸೀಟು ಸಿಕ್ಕೇ ಸಿಗತ್ತೆ. ನಾನು ಓದಿಸ್ತೀನೆ'

ಸಂಜೀವ ಬಿ.ಇ. ಮುಗಿಸುವ ವೇಳೆಗೆ ಸಂಧ್ಯಾಳ ಎರಡು ಬಾಣಂತನ ನಡೆದಿತ್ತು. ಸಂಧ್ಯಾಗೆ ತನ್ನ ಮೊದಲ ಮಗಳು ಸಿರಿಯನ್ನು ತಾಯಿ ಮನೆಯಲ್ಲೇ ಬಿಡಬೇಕೆಂಬ ಆಸೆಯಿತ್ತು. ಆದರೆ ಬೃಂದಾ ಒಪ್ಪಿರಲಿಲ್ಲ.

'ಅವಳು ಅಷ್ಟು ಹೇಳ್ತಿರುವಾಗ ಒಪ್ಪಬಾರದಾ?' ಅನ್ನಪೂರ್ಣಮ್ಮ ಕೇಳಿದ್ದರು.

'ಯಾಕೆ ಒಪ್ಪಬೇಕು?'

'ಅವಳು ಈ ಮನೆಗೆ ಸಹಾಯ ಮಾಡ್ತಾಳಂತೆ ಕಣೆ. ಮಗು ಇಲ್ಲೇ ಓದಬೇಕಮ್ಮ. ಆ ನೆಪದಲ್ಲಿ ನಾನು ನಿಮಗೆ ಸಹಾಯ ಮಾಡಬಹುದು' ಅಂದಳು.


'ನೀನು ನಿನ್ನ ಮೊಮ್ಮಗಳು ಇಲ್ಲಿರಿ. ನಾನು ಸಂಜೀವ ಒಂದು ಸಣ್ಣ ಮನೆ ಮಾಡಿಕೊಂಡು ಇರ್ತೇವೆ'

'ಯಾಕೆ ಬೃಂದಾ?'

'ಅಮ್ಮ ಅಪ್ಪ ಹೋದಾಗ ನನಗೆ 22 ವರ್ಷ ತುಂಬಿತ್ತು. ಆರು ವರ್ಷದಿಂದ ನನಗೆ ಮನೆ ಜವಾಬ್ದಾರಿ ನೋಡಿಕೊಂಡು ಸಾಕಾಗಿದೆ. ಈ ವರ್ಷ ಸಂಜೀವಂದು ಬಿ.ಇ. ಮುಗಿದು ಸೆಟ್ಲ್ ಆಗ್ತಾನೆ. ಪುನಃ ಮಗೂನ್ನ ಕರೆತಂದರೆ ಅದರ ಬೇಕುಬೇಡ ಗಮನಿಸಬೇಕು, ಮಗೂನ್ನ ನೋಡಕ್ಕೆ ಸಂಧ್ಯಾಳ ಸಂಸಾರ ಬರುತ್ತಿರತ್ತೆ. ಮಗೂಗೆ ಹುಷಾರು ತಪ್ಪಿದರೆ ನಾವೇ ಒದ್ದಾಡಬೇಕು. ನನ್ನ ಕೈಲಾಗಲ್ಲಮ್ಮ'. ಅನ್ನಪೂರ್ಣಮ್ಮನಿಗೆ ಅವಳ ಮಾತಿನಲ್ಲಿ ನಿಜವಿದೆ ಅನ್ನಿಸಿತ್ತು. ಅವರು ಜಾಣತನದಿಂದ ಸಂಧ್ಯಾಳಿಗೆ ಉತ್ತರ ಹೇಳಿದ್ದರು.

'ಬೃಂದಾ, ಸಂಜೀವ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಮನೆಯಲ್ಲಿರಲ್ಲ. ನಾನು ಒಬ್ಬಳೇ ಹೇಗೆ ನಿಭಾಯಿಸಲಿ? ಅಡುಗೆ ತಿಂಡಿ ಮಾಡಲೋ ಮೊಮ್ಮಗಳನ್ನು ನೋಡಿಕೊಳ್ಳಲೋ ನೀನೇ ಹೇಳು. ಕೋಲಾರ ಈಗ ಚೆನ್ನಾಗಿದೇಂತ ರಾಜಮ್ಮ ಹೇಳ್ತಿದ್ರು. ಮಕ್ಕಳು ಅಲ್ಲೇ ಓದಲಿ.'

ಸಂಧ್ಯಾ ತೆಪ್ಪಗಾಗಿದ್ದಳು.



**ದೂರವಾಗಲಿ ಕ್ಲೇಷ**

ಬಂದಿವೆ ಹಬ್ಬಗಳು
ದಸರಾ, ದೀಪಾವಳಿ
ಸಾಲು ಸಾಲು
ಎಲ್ಲ ಕನ್ನಡಿಗರ
ಮನೆ ಮನಗಳಲ್ಲಿ
ದೂರವಾಗಲಿ
ಮನದ ಕ್ಲೇಷ ಸವಾಲು

–ಲಕ್ಷ್ಮಣ್ ಜಮದಾಡೆ

ಸಂಜೀವ ಕೊನೆಯ ಸೆಮಿಸ್ಟರ್‌ನಲ್ಲಿರುವಾಗಲೇ ಒಂದು ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು. ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಸೆಲೆಕ್ಟ್ ಆಗಿದ್ದ. ಬೆಂಗಳೂರಿನಲ್ಲೇ ಕೆಲಸ.

'ಅಕ್ಕಾ, ನನಗೆ ಕೆಲಸ ಸಿಕ್ಕಾಗಿದೆ. ನಾನು ಕೆಲಸಕ್ಕೆ ಹೋಗಲು ಆರಂಭಿಸಿದ ಕೂಡಲೇ ನೀನು ಮದುವೆಯಾಗಬೇಕು.'

'ನನಗ್ಯಾಕೋ ಆಸಕ್ತಿಯಿಲ್ಲ ಕಣೋ'

'ನೀನು ಮದುವೆ ಆಗುವವರೆಗೂ ನಾನು ಮದುವೆಯಾಗಲ್ಲ. ನನಗೂ ಹಟ ಮಾಡಕ್ಕೆ ಬರುತ್ತದೆ ಅನ್ನುವುದನ್ನು ಮರೆಯಬೇಡ'

ಅವನೇ ಹೋಗಿ ಒಂದೆರಡು ಕಡೆ ಅವಳ ಹೆಸರನ್ನು ರಿಜಿಸ್ಟರ್ ಮಾಡಿಸಿದ್ದ.

ಸಂಜೀವ ಕೆಲಸಕ್ಕೆ ಹೋಗಲು ಆರಂಭಿಸಿದ ಮೇಲೆ ಬೃಂದಾಗೆ 4–5 ಸಂಬಂಧಗಳು ಬಂದಿದ್ದವು. ತಾಯಿಮಗ ಅವುಗಳ ಬಗ್ಗೆ ವಿಚಾರಿಸಿ ಬೇಡವೆಂದಿದ್ದರು. ಈಗ ಬಂದಿದ್ದ ಸಂಬಂಧ ಬೃಂದಾಗೆ ಸರಿಹೋಗುವಂತಿತ್ತು.

ರಾಮಗೋಪಾಲ್ ಕೆನರಾ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿದ್ದರು. 35 ವರ್ಷ. ಅಕ್ಕನಿಗೆ ಮದುವೆಯಾಗಿತ್ತು. ತಂಗಿಯರಿಬ್ಬರಿಗೆ ಮದುವೆ ಮಾಡಿದ್ದರು. ತಮ್ಮ ಎಂ.ಬಿ.ಬಿ.ಎಸ್. ಮಾಡಿ ಪ್ರಾಕ್ಟೀಸ್ ಮಾಡುತ್ತಿದ್ದ. ಈಗ ಅವರ ತಾಯಿ ಹಟ ಹಿಡಿದು ಮಗನನ್ನು ಮದುವೆಗೆ ಒಪ್ಪಿಸಿದ್ದರು. ಬೃಂದಾ ಅಂದು ತಾಯಿಯ ಜೊತೆ ಮದುವೆಗೆ ಸೀರೆ ತರಲು ಹೊರಟಿದ್ದಳು. ತನ್ನ ಉದ್ದ ಕೂದಲನ್ನು ಜಡೆ ಹೆಣೆದು ಬಿಟ್ಟಿದ್ದಳು. ಕೃತಕ ಹವಳದ ಸೆಟ್. ಅವಳುಟ್ಟಿದ್ದ ಪ್ರಿಂಟೆಡ್ ಸಿಲ್ಕ್‌ಗೆ ಮ್ಯಾಚ್ ಆಗುವಂತಿತ್ತು. ಶುಭ್ರವಾದ ಮುಖ, ಕೆಂಪು ಬಿಂದಿ ಅವಳ ಅಂದ ಹೆಚ್ಚಿಸಿದ್ದವು. ಅಷ್ಟರಲ್ಲಿ ಅವರಮ್ಮ ಮಲ್ಲಿಗೆ ಹೂವು ತಂದುಕೊಟ್ಟರು.

'ಮುಡುಕೋ ಬೃಂದಾ. ನಾನೂ ಸೀರೆ ಬದಲಾಯಿಸ್ತೇನೆ'

ಅವಳು ಜಡೆಗೆ ಹೂವು ಸಿಕ್ಕಿಸುವಾಗ ಕುತ್ತಿಗೆಯ ಬಳಿ ಮಚ್ಚೆ ಕಾಣಿಸಿತು. ಚಿಕ್ಕ ಮಚ್ಚೆಯದು. ಅವಳು ಕೆರೆದಳು, ನೋವಾಗಲಿಲ್ಲ. ಸ್ಪರ್ಶ ಜ್ಞಾನವಿಲ್ಲ.

ಅವಳು ತಕ್ಷಣ ಫೋನ್ ತೆಗೆದುಕೊಂಡು ಮನೆಯ ಹಿಂಭಾಗಕ್ಕೆ ಹೋಗಿ ತನ್ನ ಗೆಳತಿ ಸ್ಕಿನ್ ಸ್ಪೆಷಲಿಸ್ಟ್ ಡಾ. ಭಾರತಿಗೆ ಫೋನ್ ಮಾಡಿದಳು.

'ನಾನೀಗಲೇ ನಿನ್ನ ಕ್ಲಿನಿಕ್‌ಗೆ ಬರ್ತಿದ್ದೀನಿ. ಸಿಗ್ತೀಯಾ ತಾನೆ?'

'ಯಾಕೆ?'

'ಬಂದ ಮೇಲೆ ಹೇಳ್ತೀನಿ'

'ಅಮ್ಮಾ, ನನಗೆ ಕಾಲೇಜಿನಿಂದ ಫೋನ್ ಬಂದಿದೆ. ಹೋಗಲೇಬೇಕು. ಇವತ್ತಿನ ಪ್ರೋಗ್ರಾಂ ಕ್ಯಾನ್ಸಲ್'

'ಯಾಕೆ ಏನಾಯ್ತು?'

'ನಾನು ಬಂದು ಮಾತಾಡ್ತೀನಿ'

ಅವಳು ಆಟೊ ಹತ್ತಿ ಭಾರ್ಗವಿ ಕ್ಲಿನಿಕ್‌ಗೆ ಬಂದಳು. ಇಬ್ಬರು ಪೇಷೆಂಟ್ಸ್ ಇದ್ದರು. ಭಾರ್ಗವಿ ಅವರನ್ನು ನೋಡಿ ಕಳುಹಿಸಿದಳು.

'ಈಗ ಹೇಳು ಏನು ವಿಷಯ?'

'ನನ್ನ ಮದುವೆ ಗೊತ್ತಾಗಿದೆ'

'ಕಂಗ್ರಾಜುಲೇಷನ್ಸ್'

'ಆದರೆ ನಾನು ಮದುವೆಯಾಗೋದು ಬೇಡಾಂತ ನಿರ್ಧರಿಸಿದ್ದೇನೆ'

'ಯಾಕೆ?'

ಬೃಂದಾ ತನ್ನ ಕುತ್ತಿಗೆಯ ಮೇಲಿದ್ದ ಬಿಳಿ ಪ್ಯಾಚ್ ತೋರಿಸಿ ಹೇಳಿದಳು. 'ಇದು ಇವತ್ತು ನನಗೆ ಕಾಣಿಸಿತು. ನನಗೆ ನನ್ನ ರೋಗದ ಬಗ್ಗೆ ಮುಚ್ಚಿಟ್ಟು ಮದುವೆಯಾಗಲು ಇಷ್ಟವಿಲ್ಲ'

'ಮದುವೆಯಾದ ಮೇಲೆ ಕಾಣಿಸಿದ್ದಿದ್ರೆ ಏನ್ಮಾಡ್ತಿದ್ದೆ?'

'ನನ್ನ ಪ್ರಶ್ನೆ ಕೇಳಬೇಡ. ಟೆಸ್ಟ್ ಮಾಡು'

ಭಾರ್ಗವಿ ಟೆಸ್ಟ್ ಮಾಡಿ ಹೇಳಿದಳು. 'ನೀನಂದುಕೊಂಡಿರುವುದು ನಿಜ. ಆದರೆ ಇದು ಸೀರಿಯಸ್ ಕಾಯಿಲೆ ಅಲ್ಲ. ಆನುವಂಶಿಕವೂ ಅಲ್ಲ. ಆಯಿಂಟ್‌ಮೆಂಟ್ ಹಚ್ಚಿಕೊಂಡರೆ ಈ ಬಿಳಿ ಪ್ಯಾಚ್‌ಗಳು ಕಾಣುವುದೇ ಇಲ್ಲ'

'ಇದು ಕ್ರಮೇಣ ಹರಡುತ್ತದೆ ಅಲ್ವಾ?'

'ಹೌದು'

'ನಾನು ಹೇಗೆ ಮುಚ್ಚಿಟ್ಟು ಮದುವೆಯಾಗಲಿ?'

'ಯಾಕೆ ಈ ವಿಚಾರ ಇಷ್ಟು ಸೀರಿಯಸ್ ಆಗಿ ತೊಗೋತಿದ್ದೀಯ?'

'ನಾನು ರಾಮ್‌ಗೋಪಾಲ್‌ಗೆ ಹೇಳಲೇಬೇಕು, ನಾನಿನ್ನು ಬರ್ತೀನಿ'

'ದುಡುಕಬೇಡ ಬೃಂದಾ'

ಅವಳು ಉತ್ತರ ಹೇಳದೆ ಆಟೊ ಹತ್ತಿ ಕೆನರಾ ಬ್ಯಾಂಕ್ ಅಡ್ರಸ್ ಹೇಳಿ ಸೀಟ್‌ಗೆ ಒರಗಿ ಕಣ್ಮುಚ್ಚಿದ್ದಳು. ದುಃಖ ಉಕ್ಕಿ ಬಂತು. ಬಹಳ ದಿನಗಳ ನಂತರ ಒಂದು ಹೊಸ ಪ್ರಪಂಚದ ಬಾಗಿಲು ಅವಳಿಗಾಗಿ ತೆರೆದಿತ್ತು. ರಾಮ್‌ಗೋಪಾಲ್ ತನಗೆ ಸರಿಯಾದ ಜೋಡಿ ಅನ್ನಿಸಿತ್ತು. ಅವನ ಕೈ ಹಿಡಿದು ತಾನು ಸುಖವಾಗಿರಬಲ್ಲೆ ಎನ್ನಿಸಿತ್ತು. ಮನಸ್ಸು ರಂಗುರಂಗಿನ ಕನಸು ಕಂಡಿತ್ತು. ತಮ್ಮತಂಗಿಯರನ್ನು ನೆಲೆ ಮುಟ್ಟಿಸಿರುವ ರಾಮ್‌ಗೋಪಾಲ್ ಅದ್ಭುತ ವ್ಯಕ್ತಿ ಅನ್ನಿಸಿತ್ತು. ಸಾಮಾನ್ಯವಾಗಿ ಬಹಳಷ್ಟು ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಈ ತರಹ ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. ಆದರೆ ಹಿರಿಯ